ಬೆಳೆಗಾರರಿಗೆ ಬೆಳೆ ಹಾನಿ ಪರಿಹಾರ ನೀಡುವುದು

968 (1181) ಶ್ರೀ ಖಾದರ್. ಯು.ಟಿ. (ಮಂಗಳೂರು) : ಮಾನ್ಯ ತೋಟಗಾರಿಕೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಅಡಿಕೆ ಮತ್ತು ತೆಂಗಿನ ಬೆಳೆಗಾರರು ಬೆಳೆ ಹಾನಿಯಿಂದ ಆರ್ಥಿಕವಾಗಿ ನಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಅಡಿಕೆ ಮತ್ತು ತೆಂಗಿನ ಬೆಳೆಗಳಿಗೆ ಸರ್ಕಾರ ಬೆಂಬಲಬೆಲೆ ನಿಗದಿಪಡಿಸಿ ರೈತರಿಗೆ ಸಹಾಯ ಮಾಡಲು ಕ್ರಮ ಕೈಗೊಂಡಿದೆಯೇ?

ಶ್ರೀ ಎಸ್. ಎ. ರವೀಂದ್ರನಾಥ್ (ತೋಟಗಾರಿಕೆ ಮತ್ತು ಸಕ್ಕರೆ ಸಚಿವರು) :

ಅ) ಹೌದು.

Yes.

ಆ)

- 2010–11ನೇ ಸಾಲಿಗೆ ಎಫ್.ಎ.ಕ್ಯೂ ಗುಣಮಟ್ಟದ ಕೆಂಪು ಹಾಗೂ ಬಿಳಿ ಪ್ರಭೇದದ ಅಡಿಕೆಗೆ ಮಾರುಕಟ್ಟೆ ಮಧ್ಯ ಪ್ರವೇಶ ಯೋಜನೆಯಡಿ ಪ್ರತೀ ಕ್ವಿಂಟಾಲ್‌ಗೆ ಅನುಕ್ರಮವಾಗಿ ರೂ.9,790/– ಹಾಗೂ ರೂ.7,590/– ಮತ್ತು ತೆಂಗಿನಕಾಯಿಗೆ ಪ್ರತಿ ಕ್ವಿಂಟಾಲ್‌ಗೆ ರೂ.1,200/– ರಂತೆ ನಿಗದಿಪಡಿಸಿದೆ. ಬೆಲೆ ಕುಸಿತಕ್ಕೊಳಗಾದ ಸಂದರ್ಭದಲ್ಲಿ ಮಾರುಕಟ್ಟೆ ಮಧ್ಯ ಪ್ರವೇಶ ಯೋಜನೆಯಡಿ ರೈತರಿಂದ ಉತ್ಪನ್ನವನ್ನು ಖರೀದಿಸಲು ಕ್ರಮ ಕೈಗೊಳ್ಳಲಾಗುವುದು.
- For the year 2010-11 for FAQ quality of Red and White variety of Arecanut Rs.9,790/- per qtl., and Rs. 7,590/- per qtl., respectively and Rs. 1,200/- per qtl., for Coconut has been fixed

under Market Intervention Scheme whenever prices in the market fall, steps will be taken to purchase the commodities from the farmers under Market Intervention Scheme.

ರಿಯಾಯಿತಿ ದರದಲ್ಲಿ ರಸಗೊಬ್ಬರ ಮತ್ತು ಬಿತ್ತನೆ ಬೀಜಗಳ ಸರಬರಾಜು

969 (1182) ಶ್ರೀ ಖಾದರ್. ಯು.ಟಿ. (ಮಂಗಳೂರು) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೈತರಿಗೆ ಕಳೆದ 3 ವರ್ಷಗಳಿಂದ ರಿಯಾಯಿತಿ ದರದಲ್ಲಿ ರಸಗೊಬ್ಬರ ಮತ್ತು ಬಿತ್ತನೆ ಬೀಜಗಳನ್ನು ಒದಗಿಸಲು ಸರ್ಕಾರ ಎಷ್ಟು ಹಣವನ್ನು ವೆಚ್ಚ ಮಾಡಿದೆ;

ಆ) ಕೇಂದ್ರ ಸರ್ಕಾರದಿಂದ ರೈತರಿಗೆ ಯಾವ ಯಾವ ಸವಲತ್ತುಗಳು ಬರುತ್ತವೆ (ವಿವರ ಒದಗಿಸುವುದು)?

ಶ್ರೀ ಉಮೇಶ್ ಕತ್ತಿ (ಕೃಷಿ ಸಚಿವರು) :

ಅ) ರಸಗೊಬ್ಬರ :

ರಾಜ್ಯ ಸರ್ಕಾರದ ವತಿಯಿಂದ ರಸಗೊಬ್ಬರಕ್ಕೆ ಯಾವುದೇ ಸಹಾಯಧನವನ್ನು ನೀಡುತ್ತಿಲ್ಲ. ರಸಗೊಬ್ಬರದ ಸಹಾಯಧನವು ಕೇಂದ್ರ ಸರ್ಕಾರದ ನೀತಿ–ನಿಯಮಗಳಿಗೆ ಒಳಪಟ್ಟಿರುತ್ತದೆ.

Fertilizers:

The State Govt. Is not providing any subsidy for fertilizers. It is a policy matter of Govt. of India.

ಬಿತ್ತನೆ ಬೀಜ:

ವಿವರಗಳನ್ನು ಅನುಬಂಧ–1 ರಲ್ಲಿ ನೀಡಿದೆ.

Seeds:

Information furnished in **Annexure-1.**

ಆ) ಕೇಂದ್ರ ಸರ್ಕಾರದಿಂದ ರೈತರಿಗೆ ದೊರೆಯುವ ಸವಲತ್ತುಗಳ ವಿವರಗಳನ್ನು ಅನುಬಂಧ–2 ರಲ್ಲಿ ನೀಡಿದೆ.